## ನಿರ್ದೇಶಕರು, ಅಲ್ಪಸಂಖ್ಯಾತರ ಕಲ್ಯಾಣ ಇಲಾಖೆ, ಬೆಂಗಳೂರು ಇವರ ನಡವಳಿಗಳು

ವಿಷಯ: ಅಲ್ಪಸಂಖ್ಯಾತರ ಕಲ್ಯಾಣ ಇಲಾಖೆಯ ವತಿಯಿಂದ ಉಡುಪಿ ಜಿಲ್ಲೆಯ ಕಾರ್ಯನಿರ್ವಹಿಸುತ್ತಿರುವ ಮೌಲಾನಾ ಆಜ಼ಾದ್ ಮಾದರಿ ಶಾಲೆಗಳಿಗೆ ಅಗತ್ಯವಿರುವ ಸಾಮಾಗ್ರಿಗಳನ್ನು ಒದಗಿಸಲ ಅನುದಾನ ಬಿಡುಗಡೆ ಮಾಡುವ ಕುರಿತು.

ಉಲ್ಲೇಖ:
1. ಸರ್ಕಾರಿ ಆದೇಶ ಸಂಖ್ಯೆ: ಎಂಡಬ್ಲ್ಯೂಡಿ 159 ಎಂಡಿಎಸ್ 2021 ಬೆಂಗಳೂರು ದಿನಾಂಕ: 12.04.2021
2. ಸರ್ಕಾರಿ ಆದೇಶ ಸಂಖ್ಯೆ: ಎಂಡಬ್ಲ್ಯೂಡಿ 159 ಎಂಡಿಎಸ್ 2021 ಬೆಂಗಳೂರು ದಿನಾಂಕ: 22.10.2021
3. ಜಿಲ್ಲಾ ಅಧಿಕಾರಿಗಳು, ಅಲ್ಪಸಂಖ್ಯಾತರ ಕಲ್ಯಾಣ ಇಲಾಖೆ, ಉಡುಪಿ ಜಿಲ್ಲೆ ರವರ ಪತ್ರ ಸಂಖ್ಯೆ: ಅಸಂಇ/ಮೌಶಾ/ಸಿಆರ್-34/2021-22 ದಿನಾಂಕ:12.10.2021

**ಪ್ರಸ್ತಾವನೆ:-**

ಉಲ್ಲೇಖ (1) ರ ಸರ್ಕಾರಿ ಆದೇಶದಲ್ಲಿ 2020-21 ನೇ ಸಾಲಿನಲ್ಲಿ ಚಾಲ್ತಿಯಲ್ಲಿರುವ ಯೋಜನೆಗಳನ್ನು 2021-22 ನೇ ಸಾಲಿಗೆ ಮುಂದುವರಿಸಲು ಆದೇಶಿಸಿದೆ. ಉಲ್ಲೇಖ (2) ರ ಸರ್ಕಾರಿ ಆದೇಶದಲ್ಲಿ 2021-22ನೇ ಸಾಲಿನಲ್ಲಿ ಮೌಲಾನಾ ಆಜಾದ್ ಮಾದರಿ ಶಾಲೆಗಳ ನಿರ್ವಹಣೆಗೆ ಮೂರನೇ ತ್ರೈಮಾಸಿಕ ಅನುದಾನವನ್ನು ಬಿಡುಗಡೆ ಮಾಡಲಾಗಿದೆ.

ಉಲ್ಲೇಖ (3) ರಲ್ಲಿ ಮೌಲಾನಾ ಆಜ಼ಾದ್ ಮಾದರಿ ಶಾಲೆ, ಮಲ್ಲಾರು, ಕಾಪು, ಉಡುಪಿ ಜಿಲ್ಲೆ ಹಾಗೂ ಮೌಲಾನಾ ಆಜ಼ಾದ್ ಮಾದರಿ ಶಾಲೆ, ಸಾಲ್ಮರ, ಕಾರ್ಕಳ ಉಡುಪಿ ಜಿಲ್ಲೆ ಈ ಶಾಲೆಗಳಿಗೆ ಈ ಕೆಳಕಂಡ ಸಾಮಾಗ್ರಿಗಳನ್ನು ಒದಗಿಸುವಂತೆ ಜಿಲ್ಲಾ ಅಧಿಕಾರಿಗಳು, ಅಲ್ಪಸಂಖ್ಯಾತರ ಕಲ್ಯಾಣ ಇಲಾಖೆ, ಉಡುಪಿ ಜಿಲ್ಲೆ ರವರು ಅನುದಾನವನ್ನು ಬಿಡುಗಡೆ ಮಾಡಲು ಕೋರಿರುತ್ತಾರೆ.

| ಕ್ರ.ಸಂ | ಸಾಮಾಗ್ರಿಯ ಹೆಸರು | ಮೌಲಾನಾ ಆಜ಼ಾದ್ ಮಾದರಿ ಶಾಲೆ, ಮಲ್ಲಾರು, ಕಾಪು | ಮೌಲಾನಾ ಆಜ಼ಾದ್ ಮಾದರಿ ಶಾಲೆ, ಸಾಲ್ಮರ, ಕಾರ್ಕಳ |
|---|---|---|---|
| 1 | ಡೆಸ್ಕ್ ಮತ್ತು ಬೆಂಚುಗಳು | 20 | 25 |
| 2 | ಮೇಜು | 05 | 05 |
| 3 | ಕುರ್ಚಿ | 10 | 10 |
| 4 | ವಾಟರ್ ಪ್ಯೂರಿಫೈಯರ್ | 01 | 01 |
| 5 | ತೂಕದ ಯಂತ್ರ | 01 | 01 |
| 6 | ಕಂಪ್ಯೂಟರ್ | - | 01 |
| 7 | ಪ್ರಿಂಟರ್ | - | 01 |
| 8 | ಯು.ಪಿ.ಎಸ್. | - | 01 |
| 9 | ಅಲ್ಮೆರಾ | - | 02 |
| 10 | ಗ್ಯಾಸ್ ಸ್ಟವ್ | - | 01 |

ಅದರಂತೆ, ಅಲ್ಪಸಂಖ್ಯಾತರ ಕಲ್ಯಾಣ ಇಲಾಖೆಯ ವತಿಯಿಂದ ಉಡುಪಿ ಜಿಲ್ಲೆಯ ಕಾರ್ಯನಿರ್ವಹಿಸುತ್ತಿರುವ ಮೌಲಾನಾ ಆಜ಼ಾದ್ ಮಾದರಿ ಶಾಲೆ, ಮಲ್ಲಾರು, ಕಾಪು ಹಾಗೂ ಮೌಲಾನಾ ಆಜ಼ಾದ್ ಮಾದರಿ ಶಾಲೆ, ಸಾಲ್ಮರ, ಕಾರ್ಕಳ ಈ ಶಾಲೆಗಳಿಗೆ ಅಗತ್ಯವಿರುವ ಸಾಮಗ್ರಿಗಳನ್ನು ಒದಗಿಸಲು ಪ್ರತಿ ಶಾಲೆಗೆ ರೂ.5.00 ಲಕ್ಷಗಳಂತೆ ಒಟ್ಟು **ರೂ.10.00 ಲಕ್ಷ (ಹತ್ತು ಲಕ್ಷ ರೂ.ಗಳು ಮಾತ್ರ)**ಗಳ ಅನುದಾನವನ್ನು ಜಿಲ್ಲಾ ಅಧಿಕಾರಿಗಳು, ಅಲ್ಪಸಂಖ್ಯಾತರ ಕಲ್ಯಾಣ ಇಲಾಖೆ ಉಡುಪಿ ಜಿಲ್ಲೆ ರವರಿಗೆ ಬಿಡುಗಡೆ ಮಾಡಲು ನಿರ್ಧರಿಸಿದ್ದು ಅದರಂತೆ ಈ ಆದೇಶ.

**Contd...2**

# ಆದೇಶ

ಸಂಖ್ಯೆ: ಅಸಂನಿ/ಅ/ಮೌಶಾ/ಅನುದಾನ/ಸಿಆರ್-14(059)/2021-22 ದಿನಾಂಕ:30.10.2021

ಪ್ರಸ್ತಾವನೆಯಲ್ಲಿ ವಿವರಿಸಿರುವ ಅಂಶಗಳನ್ನಾಧರಿಸಿ, ಅಲ್ಪಸಂಖ್ಯಾತರ ಕಲ್ಯಾಣ ಇಲಾಖೆಯ ವತಿಯಿಂದ ಉಡುಪಿ ಜಿಲ್ಲೆಯ ಕಾರ್ಯನಿರ್ವಹಿಸುತ್ತಿರುವ ಮೌಲಾನಾ ಆಜ಼ಾದ್ ಮಾದರಿ ಶಾಲೆ, ಮಲ್ಲಾರು, ಕಾಪು ಹಾಗೂ ಮೌಲಾನಾ ಆಜ಼ಾದ್ ಮಾದರಿ ಶಾಲೆ, ಸಾಲ್ಮರ, ಕಾರ್ಕಳ ಈ ಶಾಲೆಗಳಿಗೆ ಅಗತ್ಯವಿರುವ ಸಾಮಗ್ರಿಗಳನ್ನು ಒದಗಿಸಲು ಪ್ರತಿ ಶಾಲೆಗೆ ರೂ.5.00ಲಕ್ಷಗಳಂತೆ ಒಟ್ಟು **ರೂ.10.00 ಲಕ್ಷ(ಹತ್ತು ಲಕ್ಷ ರೂ.ಗಳು ಮಾತ್ರ)**ಗಳ ಅನುದಾನವನ್ನು ಜಿಲ್ಲಾ ಅಧಿಕಾರಿಗಳು, ಅಲ್ಪಸಂಖ್ಯಾತರ ಕಲ್ಯಾಣ ಇಲಾಖೆ, ಉಡುಪಿ ಜಿಲ್ಲೆ ರವರಿಗೆ ಈ ಕೆಳಕಂಡಂತೆ ನಿಬಂಧನೆಗಳಿಗೆ ಒಳಪಟ್ಟು ಅನುದಾನ ಬಿಡುಗಡೆ ಮಾಡಿದೆ.

**ನಿಬಂಧನೆಗಳು:-**

1) **ಈ ಆದೇಶದಲ್ಲಿ ಬಿಡುಗಡೆ ಮಾಡಲಾದ ಅನುದಾನವನ್ನು ಯಾವ ಉದ್ದೇಶಕ್ಕೆ ಬಿಡುಗಡೆ ಮಾಡಲಾಗಿದೆಯೋ ಅದೇ ಉದ್ದೇಶಕ್ಕೆ ಮಾತ್ರ ಬಳಸಿಕೊಳ್ಳತಕ್ಕದ್ದು, ಯಾವುದೇ ಕಾರಣಕ್ಕೂ ಅನುದಾನವನ್ನು ಮಾರ್ಗಪಲ್ಲಟ ಮಾಡುವಂತಿಲ್ಲ.** ತಪ್ಪಿದ್ದಲ್ಲಿ ಮುಂದಿನ ಎಲ್ಲಾ ಆಗು ಹೋಗುಗಳಿಗೆ ತಮ್ಮನ್ನು ನೇರ ಹೊಣೆಗಾರನ್ನಾಗಿ ಮಾಡಲಾಗುವುದು.
2) ಈ ಆದೇಶದಲ್ಲಿ ಬಿಡುಗಡೆ ಮಾಡಿರುವ ಅನುದಾನವನ್ನು ಜಿಲ್ಲಾ ಅಧಿಕಾರಿಗಳು, ಅಲ್ಪಸಂಖ್ಯಾತರ ಕಲ್ಯಾಣ ಇಲಾಖೆ ರವರು ಕಡ್ಡಾಯವಾಗಿ ಸಂಬಂಧಪಟ್ಟ ಶಾಲೆಗಳ ಡಿಡಿಓ ಕೋಡ್‌ಗೆ ಮರು ಬಿಡುಗಡೆಗೊಳಿಸಿ ಖರ್ಚು ವೆಚ್ಚಗಳನ್ನು ಭರಿಸುವುದು.
3) ಎಲ್ಲಾ ಖರ್ಚು-ವೆಚ್ಚವನ್ನು ಕೆ.ಟಿ.ಪಿ.ಪಿ ಕಾಯ್ದೆ ಪ್ರಕಾರ ನಿಯಮಾನುಸಾರ ಭರಿಸತಕ್ಕದ್ದು.
4) ಈ ಆದೇಶದಲ್ಲಿ ಬಿಡುಗಡೆ ಮಾಡಿರುವ ಅನುದಾನಕ್ಕೆ ಖರ್ಚು ಭರಿಸಿರುವ ಅನುದಾನದ ವಿವರ, (ಖಜಾನೆಯಿಂದ ಪಡೆದ 62ಬಿ ಪ್ರತಿಯೊಂದಿಗೆ) ನಿರ್ದೇಶನಾಲಯಕ್ಕೆ ಸಲ್ಲಿಸತಕ್ಕದ್ದು.

ಇದಕ್ಕೆ ತಗಲುವ ವೆಚ್ಚವನ್ನು ಲೆಕ್ಕಶೀರ್ಷಿಕೆ 2225-04-277-0-09 ಆಬ್ಜೆಕ್ಟ್ ಕೋಡ್ (059) ಅಲ್ಪಸಂಖ್ಯಾತರ ನೂತನ ಹಾಸ್ಟೆಲ್ ಪ್ರಾರಂಭ ರಾಜ್ಯವಲಯ ಯೋಜನೆಯಡಿ 2021-22 ನೇ ಸಾಲಿನಲ್ಲಿ ಒದಗಿಸಲಾದ ಆಯವ್ಯಯದಲ್ಲಿ ಭರಿಸತಕ್ಕದ್ದು.

30/10/21

**ನಿರ್ದೇಶಕರು**
**ಅಲ್ಪಸಂಖ್ಯಾತರ ನಿರ್ದೇಶನಾಲಯ,**
**ಬೆಂಗಳೂರು.**

ಪ್ರತಿಯನ್ನು:-

1. ಕರ್ನಾಟಕ ಮಹಾಲೇಖಪಾಲರು, ಬೆಂಗಳೂರು.
2. ಸರ್ಕಾರದ ಕಾರ್ಯದರ್ಶಿಗಳು, ಅಲ್ಪಸಂಖ್ಯಾತರ ಕಲ್ಯಾಣ, ಹಜ್ ಮತ್ತು ವಕ್ಫ್ ಇಲಾಖೆ, ಬೆಂಗಳೂರು.
3. ಉಪ ಕಾರ್ಯದರ್ಶಿಗಳು, ಆರ್ಥಿಕ ಇಲಾಖೆ, ವೆಚ್ಚ-3, ಬೆಂಗಳೂರು.
4. ಉಪ ನಿರ್ದೇಶಕರು, ಖಜಾನೆ ಗಣಕೀಕರಣ ಕೇಂದ್ರ, 2ನೇ ಮಹಡಿ, ಖನಿಜ ಭವನ, ಬೆಂಗಳೂರು.
5. ಸಂಬಂಧಪಟ್ಟ ಜಿಲ್ಲಾ ಅಧಿಕಾರಿಗಳು, ಅಲ್ಪಸಂಖ್ಯಾತರ ಕಲ್ಯಾಣ ಇಲಾಖೆ ಅಗತ್ಯಕ್ರಮಕ್ಕಾಗಿ ಹಾಗೂ ಸಂಬಂದಪಟ್ಟ ಶಾಲೆಗಳ ಮುಖ್ಯೋಪಾಧ್ಯಾಯರಿಗೆ (ಜಿಲ್ಲಾ ಅಧಿಕಾರಿಗಳ ಮೂಲಕ).
6. ಸಂಬಂಧಪಟ್ಟ ಜಿಲ್ಲಾ ಖಜಾನಾಧಿಕಾರಿಗಳು.
7. ಲೆಕ್ಕಪತ್ರ ಶಾಖೆ.
8. ಹೆಚ್ಚುವರಿ ಪ್ರತಿ /ಕಛೇರಿ ಪ್ರತಿ.